# ಕರ್ನಾಟಕದ ಧೀಮಂತ ಹೋರಾಟಗಾರ ಗಂಗಾಧರರಾವ್ ದೇಶಪಾಂಡೆ

ಡಾ. ಶಿವಾನಂದ ರಂಗಪ್ಪ. ನಾಗಣ್ಣವರ
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ.
ವಿ.ಎಸ್.ಆರ್.ವಸ್ತ್ರದ ಕಲಾ, ವಿಜ್ಞಾನ ಹಾಗೂ
ವಿ.ಎಸ್.ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯ, ಹುನಗುಂದ

ಪ್ರಸ್ತಾವನೆ :

ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸುವುದರ ಮೂಲಕ ನಾಡಿನ ಜನರಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಜಾಗೃತೆ ಮೂಡಿಸಿದ ಮಹಾನಾಯಕ. ಕರ್ನಾಟಕದ ಕೇಸರಿ ಎಂದೇ ಬಿಂಬಿತರಾಗಿದ್ದವರು, ತಮ್ಮ ಜೀವನವನ್ನೇ ತಾಯ್ನಾಡಿನ ಸ್ವಾತಂತ್ರ್ಯಕ್ಕಾಗಿ ಮೀಸಲಾಗಿಟ್ಟ ಧೀಮಂತ ಹೋರಾಟಗಾರ ಗಂಗಾಧರರಾವ್ ದೇಶಪಾಂಡೆಯವರು.

ಆರಂಭಿಕ ಜೀವನ ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಪಾತ್ರ :

ಗಂಗಾಧರರಾವ್ ದೇಶಪಾಂಡೆಯವರು ಬೆಳಗಾವಿ ತಾಲೂಕಿನ ರಾಯಬಾಗ ಸಮೀಪದ (ಅಂದಿನ ಕೊಲ್ಲಾಪುರ ಸಂಸ್ಥಾನದ) ಹುದಲಿ ಗ್ರಾಮದ ಸಂಪ್ರದಾಯವಾದಿ ಋಗ್ವೇದಿ ಬ್ರಾಹ್ಮಣ ಕುಟುಂಬದ ಬಾಲಕೃಷ್ಣ ಹಾಗೂ ರಾಧಾಬಾಯಿ ದೇಶಪಾಂಡೆ ದಂಪತಿಗಳ ಉದರದಲ್ಲಿ 31ನೆಯ ಮಾರ್ಚ 1871 ರಲ್ಲಿ ತಾಯಿ ತವರೂರು ಜಲಾಲಪುರದಲ್ಲಿ ಜನಿಸಿದರು. ಬಾಲ್ಯದಲ್ಲಿಯೇ ಕನ್ನಡ ಭಾಷೆಯೊಂದಿಗೆ ಪೇಶ್ವೆಗಳ ಪ್ರಭಾವದಿಂದ ಮರಾಠಿ ಭಾಷೆಯನ್ನೂ ಕಲಿಯುತ್ತಲೇ ಬೆಳೆದರು. ತಮ್ಮ ಪ್ರಾಥಮಿಕ ಶಿಕ್ಷಣವನ್ನು ಬೆಳಗಾವಿಯ ಸರದಾರ್ಸ್ ಶಾಲೆಯಲ್ಲಿ ಪೂರೈಸಿಕೊಂಡರು. ಬಾಲ್ಯದಿಂದಲೂ ಗಾಂಧೀಜಿ, ಗೋಪಾಲಕೃಷ್ಣ ಗೋಕಲೆಯವರ ವಿಚಾರಧಾರೆಗಳು ಇವರ ಮೇಲೆ ತುಂಬಾ ಪ್ರಭಾವ ಬೀರಿದವು. ಹದಿಮೂರನೆಯ ವಯಸ್ಸಿನಲ್ಲಿಯೇ ಉನ್ನತ ಶಿಕ್ಷಣವನ್ನು (ಬಿ.ಎ) ಪುಣೆಯ ಡೆಕ್ಕನ್ ಮಹಾವಿದ್ಯಾಲಯದಲ್ಲಿ ತೇರ್ಗಡೆಯಾದರು. ಇದೇ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟದ ಗಾಳಿ ಬಿರುಗಾಳಿಯಾಗಿ ಬೀಸುತ್ತಿದ್ದು ಅದರ ಸೋಂಕು ಯವಕನಾದ ದೇಶಪಾಂಡೆಯವರಿಗೂ ತಗುಲಿತು. ಗೋಕಲೆ ಮತ್ತು ಜಸ್ಟಿಸ್ ಎಂ.ಜಿ.ರಾನಡೆಯವರನ್ನು ಭೇಟಿಯಾದರು. ತಂದೆ ಓರ್ವ ನ್ಯಾಯವಾದಿಯಾಗಿರುವುದರಿಂದ ಅವರು ಪ್ರಮುಖ ನ್ಯಾಯ ವಿಶ್ಲೇಷಣೆಯ ಸಂದರ್ಭದಲ್ಲಿ ತಮ್ಮೊಂದಿಗೆ ಗಂಗಾಧರನನ್ನೂ ಕರೆದುಕೊಂಡು ಹೋಗುತ್ತಿರುವುದರಿಮದ ನ್ಯಾಯವಾದಿಗಳ ಪ್ರಭಾವವೂ ಬೀರಿತು. ಮಗನೂ ತನ್ನಂತೆಯೇ ಓರ್ವ ಆದರ್ಶವಾದಿ ನ್ಯಾಯವಾದಿಯಾಗಬೇಕೆಂಬ ಅಭಿಲಾಷೆಯಿತ್ತು. ತಂದೆಯ ನಿರೀಕ್ಷೆಯಂತೆಯೇ ಮುಂಬೈಯಿಗೆ ಹೋಗಿ ಕಾನೂನು ಪದವಿಯನ್ನು ಪಡೆದುಕೊಂಡು ಬೆಳಗಾವಿಗೆ ಬಂದು ವಕೀಲಿ ವೃತ್ತಿಯನ್ನು ಆರಂಭಿಸಿದರು. ಬ್ರಿಟಿಷರ ದಬ್ಬಾಳಿಕೆಯ ಧೋರಣೆಯಿಂದ ಬೇಸತ್ತ ಇವರು ತಮ್ಮ ವಕೀಲಿ ವೃತ್ತಿಗೆ ತಿಲಾಂಜಲಿಯನ್ನಿಟ್ಟು ಲೋಕಮಾನ್ಯ ಬಾಲಗಂಗಾಧರ ತಿಲಕ ಅವರಿಂದ ರಾಜಕೀಯ ದೀಕ್ಷೆ ಪಡೆದುಕೊಂಡು ಸ್ವಾತಂತ್ರ್ಯ ಹೋರಾಟದಲ್ಲಿ ಪ್ರವೇಶಿಸಿದರು. ಆಗ ದೇಶಪಾಂಡೆಯವರ ತಂದೆ ಬಾಲಕೃಷ್ಣರು ಬಾಲಗಂಗಾಧರ ತಿಲಕರನ್ನು ಭೇಟಿಯಾಗಿ ಅವರಿಗೆ ಕೈಮುಗಿದು "ಲೋಕಮಾನ್ಯರೇ ನೀವು ಮಾಡುತ್ತಿರುವ ಕಾರ್ಯ ನಿಸ್ಸಂಸಯವಾಗಿ ದೊಡ್ಡದು, ದೇಶಕ್ಕೆ ಸ್ವರಾಜ್ಯ ಬರಬೇಕೆಂದು ನೀವು ಪ್ರಯತ್ನಿಸುತ್ತಿರುವುದು ಸರಿಯೇ ಆದರೆ ನನ್ನ ಮಗನನ್ನು ನಿಮ್ಮೊಂದಿಗೆ ಎಳೆಯಬೇಡಿರಿ, ನನಗೆ ಈತನೊಬ್ಬನೇ ಮಗ ಅವನು ನ್ಯಾಯವಾದಿಯಾಗಿ ಬೆಳೆಯಬೇಕು, ನಿಮಗೆ ಬೇಕಾದರೆ ಸಾಕಷ್ಟು ಬಡಮಕ್ಕಳಿದ್ದಾರೆ, ದಡ್ಡಮಕ್ಕಳಿದ್ದಾರೆ ಅವರನ್ನು ಕರೆದುಕೊಂಡು ಹೋಗಿ" ಎಂದು ಕೇಳಿಕೊಂಡರು. ಆಗ ತಿಲಕರು "ಭಾವುಸಾಹೇಬರೆ, ಬಡವರಿಗೆ ತಮ್ಮ ಹೊಟ್ಟೆ ತುಂಬಿಸಿಕೊಳ್ಳಲು ದುಡ್ಡಿನ ಸಂಪಾದನೆಗಾಗಿ ಉದ್ಯೋಗ ಮಾಡಬೇಕಾಗುತ್ತದೆ, ನೀವು ಸುದೈವಿಗಳು, ಶ್ರೀಮಂತರಿದ್ದೀರಿ ಅಲ್ಲದೆ ನನ್ನ ಕೆಲಸದಲ್ಲಿ ದಡ್ಡರಿಗೆ ಸ್ಥಾನವಿಲ್ಲ. ಎಲ್ಲ ಅನುಕೂಲತೆ ಇದ್ದ ನೀವೇ ಹೀಗೆ ಅಂದರೆ ಬಡವರು ತಮ್ಮ ಮಕ್ಕಳನ್ನು ಹೇಗೆ ಚಳುವಳಿಗೆ ಕೊಡಬಲ್ಲರು"? ಎಂದು ತಿರುಗಿ ಪ್ರಶ್ನೆಹಾಕಿದರು. ಅದಕ್ಕೆ ಪ್ರತಿಯಾಗಿ ಬಾಲಕೃಷ್ಣರು (ಭಾವುಸಾಹೇಬರು) ನಿರುತ್ತರವಾಗಿ "ಆಗಲಿ ತಿಲಕ ಮಹಾರಾಯರೆ ಇಂದಿನಿಂದ ನನ್ನ ಮಗನನ್ನು ದೇಶಕ್ಕಾಗಿ ನಿಮ್ಮ ಕಡೆಗೆ ಅರ್ಪಿಸಿದ್ದೇನೆ" ಎಂದು ಹೇಳಿ ತಮ್ಮೂರಿಗೆ ಹಿಂತಿರುಗಿದರು.

ಸ್ವದೇಶಿ ಚಳುವಳಿ ಮತ್ತು ಗಂಗಾಧರರಾವ್ ದೇಶಪಾಂಡೆ :

ದೇಶಪಾಂಡೆಯವರು 1905ರಲ್ಲಿ ಆರಂಭವಾದ ಸ್ವದೇಶಿ ಮತ್ತು ಬಹಿಷ್ಕಾರ ಚಳುವಳಿಯಲ್ಲಿ ವಿದ್ಯುಕ್ತವಾಗಿ ಭಾಗವಹಿಸಿದರು. ತಿಲಕ ಅವರ ಪ್ರಭಾವದಿಂದ ಬೆಳಗಾವಿಯಲ್ಲಿ ಒಂದು ರಾಷ್ಟ್ರೀಯ ಶಾಲೆಯನ್ನು ತೆರೆದರು. ಸ್ವಾತಂತ್ರ್ಯ ಹೋರಾಟಗಾರರಾದ ಗೋವಿಂದರಾವ್ ಯಾಳಗಿ, ಗಂಗಾಧರರಾವ್ ದೇಶಪಾಂಡೆ ಅವರು

ಬ್ರಿಟಿಷ್ ವಿರುದ್ಧ ಹೋರಾಡಲು ಎಲ್ಲಾ ಧರ್ಮಗಳ ಜನರನ್ನು ಒಂದು ಗೂಡಿಸುವ ಉದ್ದೇಶದಿಂದ 1905 ರಲ್ಲಿ ಗಣೇಶ ಹಬ್ಬವನ್ನು ಸಾರ್ವಜನಿಕ ಕಾರ್ಯಕ್ರಮವಾಗಿ ಆಚರಿಸಲು ನಿರ್ಧರಿಸಿದರು. ಗೋವಿಂದರಾವ್ ಯಾಳಗಿಯವರ ಮನೆಯಲ್ಲಿ ಮೊದಲ ಸಾರ್ವಜನಿಕ ಗಣೇಶ ಮೂರ್ತಿಯನ್ನು ಸ್ಥಾಪಿಸಲಾಯಿತು. 1906ರ ಸಾರ್ವಜನಿಕ ಗಣೇಶ ಉತ್ಸವಕ್ಕೆ ದೇಶಪಾಂಡೆಯವರು ಕರೆಯ ಮೇರೆಗೆ ತಿಲಕರು ಬೆಳಗಾವಿಗೆ ಆಗಮಿಸಿದ್ದರು. ಗಂಗಾಧರ ರಾಯರು ಬೆಳಗಾವಿಯಲ್ಲಿ "ಸ್ವದೇಶಿ ವಸ್ತುಭಂಡಾರ" ಎಂಬ ಅಂಗಡಿಯನ್ನು ಆರಂಭಿಸಿದರು.

ಸೂರತ್ ಅಧಿವೇಶನ ಮತ್ತು ಗಂಗಾಧರರಾವ್ ದೇಶಪಾಂಡೆ :

ರಾಸ್‌ಬಿಹಾರಿ ಬೋಸ್ ಅಧ್ಯಕ್ಷತೆ ವಹಿಸಿದ್ದ 1907ರ ಸೂರತ ಅಧಿವೇಶನದಲ್ಲಿ ಧಾರವಾಡದಿಂದ ಆಲೂರು ವೆಂಕಟರಾಯರು, ವಿಜಾಪುರದಿಂದ ಶ್ರೀನಿವಾಸರಾವ್ ಕೌಜಲಗಿ ಅವರು ಭಾಗವಹಿಸಿದ್ದರೆ ಬೆಳಗಾವಿ ಜಿಲ್ಲೆಯಿಂದ ಗಂಗಾಧರರಾವ್ ಪ್ರತಿನಿಧಿಸಿದ್ದರು. ಈ ಅವಧಿಯಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸಿಗರಲ್ಲಿ ಉಂಟಾದ ಭಿನ್ನತೆಯಿಂದ ಕಾಂಗ್ರೆಸ್ ತೀವ್ರಗಾಮಿಗಳು ಮತ್ತು ಮಂದಗಾಮಿಗಳಾಗಿ ಒಡೆದಾಗ ತೀವ್ರಗಾಮಿ ಮುಖಂಡನಾದ ತಿಲಕರ ಪರವಾಗಿ ಹೋರಾಟದ ಮಾರ್ಗ ಹಿಡಿದರು. ಬೆಳಗಾವಿಗೆ ಬಂದು ಮೆಝಿನಿ ಕ್ಲಬ್ ಎಂಬ ಗುಪ್ತ ಕ್ರಾಂತಿಕಾರಿ ತಂಡವೊಂದನ್ನು ರಚಿಸಿದರು. 1908ರಲ್ಲಿ ರಾಷ್ಟ್ರೀಯತೆಯ ಪ್ರಚಾರಕ್ಕಾಗಿ ತಿಲಕರು ಮುಂಬೈಯಿಯಲ್ಲಿ ಆರಂಭಿಸಿದ 'ರಾಷ್ಟ್ರಮತ' ಪತ್ರಿಕೆಯನ್ನು ದೇಶಪಾಂಡೆ ಮತ್ತು ಕಾಕಾ ಕಾಲೇಲಕರರು ಮುಂದುವರೆಸಿಕೊಂಡು ಹೋಗುವ ಜವಾಬ್ದಾರಿ ಪಡೆದರು. ತಿಲಕರು ಬೆಳಗಾವಿ ಕರ್ನಾಟಕದ್ದು, ಕನ್ನಡಿಗರದ್ದು ಅಂದಾಗ ನೀವು ಕನ್ನಡದಲ್ಲಿಯೇ ಭಾಷಣ ಮಾಡಿರಿ ಎಂದು ದೇಶಪಾಂಡೆಯವರಿಗೆ ಹೇಳುತ್ತಿದ್ದರು. (ಎಲ್.ಎಸ್.ಶಾಸ್ತ್ರಿ : ಸ್ವಾತಂತ್ರ್ಯ ಸಂಗ್ರಾಮ (ರಾಷ್ಟ್ರ, ರಾಜ್ಯ ಮತ್ತು ಬೆಳಗಾವಿ ಜಿಲ್ಲೆ) ಪು.51–53)

ಹೊಂ ರೂಲ್ ಚಳುವಳಿ ಮತ್ತು ಗಂಗಾಧರರಾವ್ ದೇಶಪಾಂಡೆ :

1916ರಲ್ಲಿ ಆಯೋಜಿಸಿದ ರಾಜಕೀಯ ಸಮ್ಮೇಳನಕ್ಕೆ ದೇಶಪಾಂಡೆಯವರ ಆಹ್ವಾನದ ಮೇರೆಗೆ ಗಾಂಧಿಜಿಯವರು ಬೆಳಗಾವಿಗೆ ಆಗಮಿಸಿದ್ದರು. ಇದರಿಂದ ಗಾಂಧೀಯವರು ತಿಲಕರನ್ನು ಭೇಟಿಯಾಗಲು ಸಹಾಯವಾಯಿತು. ಮುಂದೆ ದೇಶಪಾಂಡೆಯವರು ಗಾಂಧೀಯವರ ಅಸಹಕಾರ ಚಳುವಳಿಯನ್ನು ಬೆಂಬಲಿಸಿದರು. 1916ರಲ್ಲಿ ಆ್ಯನಿಬೆಸೆಂಟ್‌ರ ಮಧ್ಯಸ್ಥಿಕೆಯಿಂದ ಕಾಂಗ್ರೇಸಿಗರಲ್ಲಿ ಉಂಟಾದ ಭಿನ್ನಾಭಿಪ್ರಾಯ ಕೊನೆಗೊಂಡಿತು. ಆ ಮೂಲಕ ಎಲ್ಲರೂ ಒಂದಾಗಿ ಹೋಂ ರೂಲ್ ಚಳುವಳಿ ಆರಂಭಿಸಿದರು. ತಿಲಕರು ಬೆಳಗಾವಿಗೆ ಬಂದಾಗ ಅವರೊಂದಿಗೆ ಜಿಲ್ಲೆಯ ಗುರ್ಲಹೊಸೂರು, ಧಾರವಾಡಕ್ಕೆ ಸಂಚಾರಮಾಡಿ ಅವರೊಂದಿಗೆ ಸ್ವಾತಂತ್ರ್ಯ ಹೋರಾಟದ ಅರಿವನ್ನು ಜನರಲ್ಲಿ ಮೂಡಿಸಿದರು. ತಿಲಕರ ಮಾರ್ಗದರ್ಶನದಂತೆಯೇ ಬೆಳಗಾವಿಯಲ್ಲಿ ಹೋಂ ರೂಲ್ ಲೀಗ್‌ದ ಶಾಖೆ ಸ್ಥಾಪಿಸಿದರು. 1917 ರಲ್ಲಿ ಆರಂಭವಾದ ಚಂಪಾರಣ್ಯ ಕಾರ್ಮಿಕರ ಸಮಸ್ಯೆಗಳನ್ನು ಗಮನಿಸಿದ ಗಾಂಧೀಜಿಯವರು ಈ ಕಾರ್ಮಿಕರ ಶೋಷಣೆ ನಿವಾರಣೆಯಾಗಬೇಕಾದರೆ ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕು ಎಂದು ನಿರ್ಧರಿಸಿ; ಈ ಭಾಗದ 6 ಹಳ್ಳಿಗಳಿಗೆ ಪ್ರಾಥಮಿಕ ಶಾಲೆಗಳನ್ನು ಗಾಂಧೀಜಿಯವರು ಆರಂಭಿಸಿ ಈ ಶಾಲೆಗಳ ಬೋಧನೆಗಾಗಿ ಶಿಕ್ಷಕರನ್ನು ಕಳುಹಿಸಬೇಕೆಂದು ಹೇಳಿದ್ದರಿಂದ ಅವರ ಕೋರಿಕೆಯಂತೆ ದೇಶಪಾಂಡೆಯವರು ಬಾಬಾಸಾಹೇಬ ಸೋಮಣ ಮತ್ತು ಪುಂಡಲೀಕಜಿ ಕಾತಗಡೆ ಅವರನ್ನು ಚಂಪಾರಣ್ಯ ಭಾಗದ ಶಾಲೆಗೆ ಕಳುಹಿಸಿಕೊಟ್ಟರು ಅವರು ಅಲ್ಲಿ ಒಂದು ವರ್ಷ ಶಿಕ್ಷಕರಾಗಿ ಸೇವೆ ಮಾಡಿದರು. (ಅದೇ. ಪು.54–55)

1918 ರಲ್ಲಿ ಕರ್ನಾಟಕ ಪ್ರಾಂತೀಯ ಪರಿಷತ್ ಸಭೆಯನ್ನು ವಿಜಾಪುರದಲ್ಲಿ ಆಯೋಜಿಸಿದಾಗ ಗಾಂಧೀಜಿಯವರು ಆ ಸಭೆಯಲ್ಲಿ ಉಪಸ್ಥಿತರಿದ್ದರು. ಆದರೆ ತಿಲಕರು ಬಂದಿರಲಿಲ್ಲವಾದರೂ ಅವರ ಅನುಯಾಯಿಗಳಾಗಿ ಚಿಂತಾಮಣರಾವ್ ಕೇಳಕರ, ಪಿ.ಎಂ.ಬಾಪಟ ಮತ್ತು ಗಂಗಾಧರರಾವ್ ದೇಶಪಾಂಡೆ ಮೊದಲಾದವರು ಭಾಗವಹಿಸಿದ್ದರು.

ನಾಗಪುರ ಅಧಿವೇಶನ ಮತ್ತು ಗಂಗಾಧರರಾವ್ ದೇಶಪಾಂಡೆ :

1920ರಲ್ಲಿ ನಾಗಪುರದಲ್ಲಿ ಜರುಗಿದ ರಾಷ್ಟ್ರೀಯ ಕಾಂಗ್ರೇಸಿನ ಅಧಿವೇಶನದಲ್ಲಿ ಕರ್ನಾಟಕದಿಂದ 800 ಜನ ಪ್ರತಿನಿಧಿಗಳು ಭಾಗವಹಿಸಿದ್ದರು ಅವರಲ್ಲಿ ಮುಂದಾಳುಗಳಾಗಿ ಕಾರ್ಯನಿರ್ವಹಿಸುವುದರೊಂದಿಗೆ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತೀಯ ಕಾಂಗ್ರೆಸ್ ಸಮೀತಿ ರಚನೆಯ ಬೇಡಿಕೆಯಿಟ್ಟರು. ಇದಕ್ಕೆ ಅನುಮತಿಯೂ ಲಭ್ಯವಾಯಿತು. ಆ ಪ್ರಕಾರ ಗಂಗಾಧರರಾವ್ ದೇಶಪಾಂಡೆ ಅಧ್ಯಕ್ಷತೆಯಲ್ಲಿ ಕರ್ನಾಟಕ ಪ್ರಾದೇಶಿಕ ಕಾಂಗ್ರೇಸ್ ಪಕ್ಷ ಜನ್ಮತಾಳಿತು. ಮುಂದೆ 1921 ರಲ್ಲಿ ನವಲಗುಂದದಲ್ಲಿ ಖಿಲಾಫತ್ ಚಳುವಳಿಯನ್ನು ಬೆಂಬಲಿಸಿ ಸಾರ್ವಜನಿಕವಾಗಿ ಭಾಷಣ ಮಾಡಿದ್ದರಿಂದ ಬಂಧನಕ್ಕೊಳಗಾದರು.

**ಗಾಂಧೀಯುಗದಲ್ಲಿ ಗಂಗಾಧರರಾವ್ ದೇಶಪಾಂಡೆ :**

1920ರ ಅಗಸ್ಟ್ 20 ರಂದು ಬಾಲಗಂಗಾಧರ ತಿಲಕರು ಮರಣ ಹೊಂದಿದ ತರುವಾಯ ಸ್ವಾತಂತ್ರ್ಯ ಹೋರಾಟದ ಚುಕ್ಕಾಣಿಯನ್ನು ಗಾಂಧೀಜಿಯವರು ವಹಿಸಿಕೊಂಡರು. ಒಂದೊಂದು ಭಾಗದಲ್ಲಿ ಸ್ವಾತಂತ್ರ್ಯ ಹೋರಾಟದ ನಿಧಿಯನ್ನು ಸಂಗ್ರಹಿಸುವ ಜವಾಬ್ದಾರಿಯನ್ನು ಒಬ್ಬೊಬ್ಬರಿಗೆ ನೀಡಿದರು. ವಿಜಾಪುರದಲ್ಲಿ ಶ್ರೀನಿವಾಸ ಕೌಜಲಗಿಯವರು ವಹಿಸಿಕೊಂಡರೆ ಬೆಳಗಾವಿ ಭಾಗದ ಹೋರಾಟ ನಿಧಿ ಸಂಗ್ರಹದ ಜವಾಬ್ದಾರಿಯನ್ನು ಗಂಗಾಧರರಾವ್ ದೇಶಪಾಂಡೆಯವರು ವಹಿಸಿಕೊಂಡರು. ಈ ನಿಧಿಗೆ 'ಟಿಳಕ ಸ್ವರಾಜ್ಯ ನಿಧಿ' ಎಂದು ಕರೆದರು. ಅಗಷ್ಟದಲ್ಲಿ ಗಾಂಧೀಜಿಯವರು ಟಿಳಕ ಸ್ವರಾಜ್ಯ ನಿಧಿ ಸಂಗ್ರಹಿಸುವ ಕುರಿತು ಚರ್ಚಿಸಲು ಶೌಕತ್‌ಅಲಿಯೊಂದಿಗೆ ಕರ್ನಾಟಕಕ್ಕೆ ಆಗಮಿಸಿ ಮಂಗಳೂರು, ಬೆಂಗಳೂರು, ನಿಪ್ಪಾಣಿ, ಹುಕ್ಕೇರಿ, ಸಂಕೇಶ್ವರಗಳಿಗೆ ಸಂಚಾರ ಮಾಡಿ ಬೆಳಗಾವಿಯ ಮಾರುತಿ ಗುಡಿಯ ಬಳಿ ಸೇರಿದ ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದರು. ಅಧಿವೇಶನಕ್ಕೂ ಮೊದಲು ದಿಲ್ಲಿಯಲ್ಲಿ ಐಕ್ಯತಾ ಸಮ್ಮೇಳನವು ಜರುಗಿದಾಗ ರಾಷ್ಟ್ರೀಯ ಕಾಂಗ್ರೆಸ್ಸಿಗರಲ್ಲಿಯ ಭಿನ್ನಮತ ನಿವಾರಿಸುವ ಪ್ರಯತ್ನ ನಡೆದಾಗ ಕರ್ನಾಟಕದ ಪರವಾಗಿ ದೇಶಪಾಂಡೆ ಅವರು ಹಾಜರಾಗಿದ್ದರು. ಮುಂದೆ ಅಹಮದಾಬಾದನಲ್ಲಿ ಅಖಿಲ ಭಾರತ ಚರಕಾಸಂಘದ ಸಭೆಯಲ್ಲಿಯೂ ದೇಶಪಾಂಡೆ ಕರ್ನಾಟಕವನ್ನು ಪ್ರತಿನಿಧಿಸಿದ್ದರು.

ಮೌಲಾನಾ ಮಹಮ್ಮದ ಅಲಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಕಾಕಿನಾಡ 38ನೇ ರಾಷ್ಟ್ರೀಯ ಕಾಂಗ್ರೇಸಿನ ಅಧಿವೇಶನದಲ್ಲಿ ಮುಂದಿನ ಅಧಿವೇಶನ ಕರ್ನಾಟಕದಲ್ಲಿ ಆಗಬೇಕೆಂದು ನಿರ್ಧರಿಸಲಾಯಿತು. ಅದರಿಂದ ಉತ್ಸಾಹಗೊಂಡ ಗಂಗಾಧರರಾವ್ ದೇಶಪಾಂಡೆಯವರು ಅಧಿವೇಶನ ಬೆಳಗಾವಿಯಲ್ಲಿಯೇ ನಡೆಯಬೇಕು ಎಂದು ಹಠಹಿಡಿದರೆ, ಶ್ರೀನಿವಾಸರಾವ್ ಕೌಜಲಗಿಯವರು ವಿಜಾಪುರದಲ್ಲಿ ಎಂದರೆ ಕಾರ್ನಾಡ ಸದಾಶಿವರಾಯರು ಮಂಗಳೂರಲ್ಲಿ ಜರುಗಬೇಕೆಂದು ವಾದಿಸಿದರು. ಕೊನೆಗೆ ಗಂಗಾಧರರಾವ್ ಅವರ ಬೇಡಿಕೆ ಈಡೇರಿತು. ತರುವಾಯ ಅಧ್ಯಕ್ಷತೆಯ ವಿಷಯದಲ್ಲಿಯೂ ಗಾಂಧೀಜಿಯವರೇ ಅಧ್ಯಕ್ಷತೆ ವಹಿಸಿಕೊಳ್ಳಬೇಕೆಂದು ಕಾಂಗ್ರೇಸಿಗರ ಮುಂದೆ ಬೇಡಿಕೆಯಿಟ್ಟರು ಆರಂಭದಲ್ಲಿ ಒಪ್ಪದ ಗಾಂಧೀಜಿಯವರು ನಾಯಕರ ಒತ್ತಾಯದ ಮೇರೆಗೆ ಒಪ್ಪಿಕೊಂಡರು. ಅಧಿವೇಶನಕ್ಕೆಂದೇ ಮೊದಲೇ ದೇಶಪಾಂಡೆಯವರು ವಾಣಿಜ್ಯೋದ್ಯಮಿಗಳಿಂದ ರೂ.30000/- ಹಣ ಕೂಡಿಸಿದ್ದರು.

**1924ರ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಗಂಗಾಧರರಾವ್ ದೇಶಪಾಂಡೆ :**

ಗಾಂಧೀಜಿಯವರು ಅಧ್ಯಕ್ಷತೆ ವಹಿಸಲಿರುವ ಏಕೈಕ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ಇದಾಗಿತ್ತು. ಇದರಿಂದ ದೇಶಪಾಂಡೆಯವರ ಮುಂದಾಳತ್ವದಲ್ಲಿ ಅತ್ಯಂತ ವಿಜೃಂಭನೆಯಿಂದ ಅಧಿವೇಶನ ನಡೆಸಲು ತೀರ್ಮಾಣಿಸಲಾಯಿತು. ಸ್ವಾಗತ ಸಮಿತಿಯ ಅಧ್ಯಕ್ಷತೆಯನ್ನು ಗಂಗಾಧರರಾವ್ ದೇಶಪಾಂಡೆ, ಮಧ್ವರಾವ್ ಕೆಂಬಾವಿ ಮತ್ತು ಭೀಮರಾವ್ ಪೋತದಾರ, ಬಾಬಾಸಾಹೇಬ ಸೋಮಣ್ಣ ಕಾರ್ಯದರ್ಶಿಗಳಾಗಿ, ನಾ.ಸು.ಹರ್ಡೇಕರರು ಹಿಂದೂಸ್ಥಾನಿ ಸೇವಾಧಳದ ಮುಂದಾಳತ್ವ ವಹಿಸಿಕೊಂಡಿದ್ದರು, ಸಭೆ ನಡೆಯುವ ಸ್ಥಳಕ್ಕೆ ವಿಜಯನಗರವೆಂದೂ, ಆಗಮಿಸಿದ ಜನರಿಗೆ ಕುಡಿಯಲು ಮತ್ತು ಸ್ನಾನಕ್ಕೆಂದು ತೆಗೆಸಿದ ಬಾವಿಯನ್ನು ಪಂಪಾಸರೋವರವೆಂದೂ ನಾಮಕರಣ ಮಾಡಲಾಯಿತು. ಅಧಿವೇಶನವು 1924 ನೇ ಡಿಸೆಂಬರ್ 26, 27 ಮತ್ತು 28ನೆಯ ರವರೆಗೆ ಜರುಗಿತು. 12 ವರ್ಷದ ಬಾಲಕಿಯಾಗಿದ್ದ ಗಂಗೂಬಾಯಿ ಹಾನಗಲ್ 'ಒಂದೇ ಮಾತರಂ' ಗೀತೆಯನ್ನು ಮತ್ತು ಹುಯಿಲಗೋಳ ನಾರಾಯಣರಾಯರು ರಚಿಸಿದ 'ಉದಯವಾಗಲಿ ನಮ್ಮ ಚಲುವ ಕನ್ನಡನಾಡು' ಗೀತೆಯನ್ನು ಹಾಡಿದರು. ಅಧಿವೇಶನದಲ್ಲಿ ವಲ್ಲಭಬಾಯಿ ಪಟೇಲ, ಬಾಬು ರಾಜೇಂದ್ರ ಪ್ರಸಾದ, ರಾಜಗೋಪಾಲಾಚಾರ್ಯರು, ಸರೋಜಿನಿದೇವಿ ನಾಯ್ಡು, ಜವಹರಲಾಲ ನೇಹರು, ಮೋತಿಲಾಲ ನೇಹರು, ಮೌಲಾನಾ ಶೌಕತ್ ಅಲಿ, ಮೌಲಾನಾ ಮಹಮ್ಮದ ಅಲಿ, ಚಿತ್ತರಂಜನದಾಸ್, ಲಾಲಾ ಲಜಪತರಾಯ್ ಮುಂತಾದವರು ಭಾಗವಹಿಸಿದ್ದರು.

ಅಧಿವೇಶನಕ್ಕಾಗಿ ಗಂಗಾಧರರಾವ ಅವರು ಕರ್ನಾಟಕದ ವಿವಿಧ ಭಾಗಗಳಿಗೆ ಕುದುರೆಯ ಮೇಲೆ ಸವಾರಿ ಮಾಡಿ ಹಣ ಸಂಗ್ರಹಣ ಮಾಡಿದ್ದರು. ಅಧಿವೇಶನದ ಅಧ್ಯಕ್ಷೀಯ ಮಾತುಗಳನ್ನಾಡುತ್ತಾ ಗಾಂಧೀಜಿಯವರು ಸ್ವರಾಜ್ಯದ ಮಾರ್ಗದ ಕುರಿತು ಜನರಿಗೆ ಮನವರಿಕೆ ಮಾಡಿಕೊಡುವುದರೊಂದಿಗೆ ನಾಡಿನ ಪ್ರತಿಯೊಬ್ಬ ಅಕ್ಕ-ತಂಗಿಯರು, ಅಣ್ಣ ತಮ್ಮಂದಿರರು ಚರಕವನ್ನು ಬಳಸಿ ನೂಲು ತೆಗೆಯುವ ಮೂಲಕ ಖಾದಿ ತಯಾರಿಸಿ, ಧರಿಸಿ ಸ್ವರಾಜ್ಯವನ್ನು ಸಂಪಾದಿಸಬೇಕು ಎಂದು ಹೇಳಿದರು. ಅದೇ ದಿನ ಸಂಜೆ ಮೈಸೂರು ಆಸ್ಥಾನ ವಿದ್ವಾಂಸರೂ, ಸಂಗೀತಗಾರರೂ ಆದ ವಿದ್ವಾನ್ ವೀಣೆಶೇಷಣ್ಣನವರ ಸಂಗೀತ ಕಾರ್ಯಕ್ರಮವೂ ಜರುಗಿತು. ಮರುದಿನ ಗುಲಬರ್ಗಾದ ದಂಗೆಗಳ ಕುರಿತಾಗಿ ಪ್ರಸ್ತಾಪಿಸಲಾಯಿತು. ಮದ್ಯಪಾನ ಮತ್ತು ಗಾಂಜಾ ಬೆಳೆಯುವುದನ್ನು ತಡೆಗಟ್ಟಬೇಕೆಂಬ ಗೊತ್ತುವಳಿಯನ್ನು

ಅಂಗೀಕರಿಸಲಾಯಿತು. ದರಂತೆ ಗೋವುಗಳನ್ನು ರಕ್ಷಿಸಲು ಏನಾದರೂ ಯೋಜನೆಯನ್ನು ರೂಪಿಸಬೇಕು, ಅವುಗಳಿಗೂ ಗೌರವವನ್ನು ತೋರಿಸಬೇಕು ಇಲ್ಲವಾದರೆ ಸ್ವರಾಜ್ಯಕ್ಕೆ ಅರ್ಥವೇ ಇಲ್ಲ ಎಂದು ಹೇಳಿದರು. ಮುಂದುವರೆದು ದೇಶಪಾಂಡೆಯವರ ತಂಡವು ಅಧಿವೇಶನವನ್ನು ಅಚ್ಚುಕಟ್ಟಾಗಿ ಆಯೋಜಿಸಿದೆ ಎಂದು ಮುಕ್ತಕಂಠದಿಂದ ಹೊಗಳಿದರು.

ಅಧಿವೇಶನದ ಶಿಸ್ತು, ಅಚ್ಚುಕಟ್ಟುತನವನ್ನು ಕಂಡ ಗಾಂಧೀಜಿಯವರು ತಮ್ಮ 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ "ಬೆಳಗಾವಿ ಇಂಪ್ರೆಶನ್' ಎಂಬ ಶೀರ್ಷಿಕೆಯ ಅಡಿಯಲ್ಲಿ ಅಧಿವೇಶನ ಕುರಿತು ಬರೆಯುತ್ತ ಸಂಘಟಕನ ವಿಜಯವೆಂದು ವರ್ಣಿಸಿದ್ದರು. ದೇಶಪಾಂಡೆ ಗಂಗಾಧರರಾಯರೂ ಅವರ ಕಾರ್ಯಕರ್ತರ ತಂಡವೂ ಅತ್ಯುನ್ನತ ಮಟ್ಟಕ್ಕೆ ಏರಿದರು ಎಂದು ಪ್ರಶಂಸೆಯ ಮಾತುಗಳನ್ನು ಬಿಚ್ಚಿಟ್ಟಿದ್ದರು. ಗಾಂಧೀಜಿಯವರ ಕಾರ್ಯದರ್ಶಿ ಮಹಾದೇವ ದೇಶಾಯಿ 'ಬೆಳಗಾವಿಯ ಪುಣ್ಯತೀರ್ಥದಲ್ಲಿ' ಎಂಬ ಲೇಖನದಲ್ಲಿ ಬೆಳಗಾವಿಯ ಅಧಿವೇಶನದ ಅಧ್ಯಕ್ಷತೆಯನ್ನು ಗಾಂಧೀಜಿಯವರು ವಹಿಸಿದ್ದು ಕರ್ನಾಟಕದ ಭಾಗ್ಯ ಎನ್ನಬೇಕು', ಅವರ ವಿಚಾರ ಕಾರ್ಯಗಳಿಂದ ಬೆಳಗಾವಿಯ ವಾತಾವರಣವು ಪುನೀತವಾಯಿತು ಎಂದು ದಾಖಲಿಸಿದ್ದಾರೆ. ಇದೆಲ್ಲದಕ್ಕೂ ಮುಖ್ಯ ಕಾರಣ ಗಂಗಾಧರರಾವ್ ದೇಶಪಾಂಡೆ ಮತ್ತು ಅವರ ತಂಡವೆನ್ನಬಹುದು.

ಖಾದಿ ಪ್ರಚಾರ ಮತ್ತು ಗಂಗಾಧರರಾವ್ ದೇಶಪಾಂಡೆ :

ಅಧಿವೇಶನದ ತರುವಾಯ ಗಾಂಧೀಜಿಯವರು ಬೆಳಗಾವಿ ಹತ್ತಿರದ ಹುದಲಿಯ [ದೇಶಪಾಂಡೆಯವರ ಜನ್ಮಸ್ಥಳ] ಕುಮರಿ ಆಶ್ರಮದಲ್ಲಿ ಒಂದು ವಾರ ವಾಸ್ತವ್ಯ ಹೂಡಿದ್ದರು ಈ ಭಾಗದ ಚಟುವಟಿಕೆಗೆ ಸ್ಫೂರ್ತಿ ತುಂಬಿದರು. ಸ್ವದೇಶಿ ಆಂದೋಲನದ ಸಂದರ್ಭದಲ್ಲಿ ಬೆಳಗಾವಿ ಜಿಲ್ಲೆಯ ಹೋರಾಟದ ಮುಂಚೂಣಿಯಲ್ಲಿದ್ದ ಗಂಗಾಧರರಾವ್ ದೇಶಪಾಂಡೆ, ಗೋವಿಂದರಾವ್ ಯಾಳಗಿ, ಹನಮಂತರಾವ್ ದೇಶಪಾಂಡೆ ಮೊದಲಾದವರಿಂದ ಪ್ರೇರಣೆ ಪಡೆದು ನೂರಾರು ಜನರು ಚಳುವಳಿಯಲ್ಲಿ ಪಾಲ್ಗೊಂಡರು. ದೇಶಪಾಂಡೆಯವರ ಮುಂದಾಳತ್ವದಲ್ಲಿ ಹುದಲಿ, ಪಾಶ್ಚಾಪುರದಲ್ಲಿ ಖಾದಿ ಉತ್ಪಾದನಾ ಕೇಂದ್ರಗಳನ್ನು ತೆರೆದರು. ದೇಶಪಾಂಡೆಯವರು ಹುದಲಿಯ ತಮ್ಮ ತೋಟದಲ್ಲಿ ಒಂದು ಆಶ್ರಮ ಸ್ಥಾಪಿಸಿದರು.

ಹುದಲಿಯ ಸುತ್ತಮುತ್ತಲಿನ ಗ್ರಾಮಗಳಾದ ಹುದಲಿ, ಸುಲದಾಳ, ಅಕ್ಕತಂತೇರಹಾಳ ಮುಂತಾದ ಕಡೆಗಳಲ್ಲಿಯೂ ಖಾದಿಕೇಂದ್ರಗಳು ಸ್ಥಾಪನೆಯಾದವು ಇದರಿಂದ ಸ್ವದೇಶಿ ಚಳುವಳಿ ತೀವ್ರಗೊಂಡಿತು. ಖಾದಿ ಪ್ರಚಾರ, ಆದರ್ಶ ಸತ್ಯಾಗ್ರಹ, ಹರಿಜನೋದ್ಧಾರ, ಗೋವು ರಕ್ಷಣೆ, ಗ್ರಾಮಗಳ ಅಭಿವೃದ್ಧಿ ಮುಂತಾದ ಸ್ವದೇಶಿ ಕಾರ್ಯಚಟುವಟಿಕೆಗಳಿಗೆ ಹೆಚ್ಚಿನ ಒಲವನ್ನು ತೋರಿಸಿದರು. ಹುದಲಿಯ ಖಾದಿ ಗ್ರಾಮೋಧ್ಯಮ ಕೇಂದ್ರಕ್ಕೆ ಹೊಸದಾದ ಚೈತನ್ಯ ತುಂಬಿದರು. ಗಾಂಧಿಜೀಯವರಂತೆಯೇ ಕರ್ನಾಟಕದಲ್ಲಿ ಅಖಿಲ ಭಾರತ ನೇಕಾರರ ಸಂಘ ಮತ್ತು ಅಖಿಲ ಭಾರತ ಗುಡಿ ಕೈಗಾರಿಕೆಗಳ ಸಂಘದ ಶಾಖೆಗಳನ್ನು ಪ್ರಾರಂಭಿಸಿದ ಶ್ರೇಯಸ್ಸು ಗಂಗಾಧರರಾವ ಅವರದ್ದಾಗಿದೆ. 1926ರಲ್ಲಿ ಮೈಸೂರು ಸಂಸ್ಥಾನದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ ಅವರ 43ನೇ ಜನ್ಮದಿನದ ಸ್ಮರಣೆಗಾಗಿ ಬೆಂಗಳೂರಿನ ಕೋಟೆ ಪ್ರದೇಶದಲ್ಲಿ ಖಾದಿ ವಸ್ತ್ರಾಲಯದ ಮಳಿಗೆಯ ಸ್ಥಾಪನೆ ಮಾಡಿದರು.

ಉಪ್ಪಿನ ಸತ್ಯಾಗ್ರಹ ಮತ್ತು ಗಂಗಾಧರರಾವ್ ದೇಶಪಾಂಡೆ :

14ನೇ ಫೆಬ್ರುವರಿ 1930 ರಂದು ಸಾಬರಮತಿ ನದಿ ತೀರದ ಮೇಲಿರುವ ಗಾಂಧೀಜಿಯವರ ಆಶ್ರಮದಲ್ಲಿ ಕಾಂಗ್ರೆಸ್ ಕಾರ್ಯಕಾರಿಣಿ ಸಭೆ ನಡೆಯಿತು. ಆ ಸಭೆಗೆ ಕರ್ನಾಟಕದಿಂದ ಗಂಗಾಧರರಾವ್ ದೇಶಪಾಂಡೆ, ಡಾ.ನಾ.ಸು.ಹರ್ಡೇಕರ್ ಮೊದಲಾದ ನಾಯಕರು ಭಾಗವಹಿಸಿದ್ದರು. ಅಲ್ಲಿ ಕಾನೂನುಭಂಗ ಚಳುವಳಿಯನ್ನು ಕೂಡಲೆ ಆರಂಭಿಸುವುದರ ಕುರಿತಾದ ತೀರ್ಮಾಣ ಮಾಡಲಾಯಿತು. ಆದರೆ ಚಳುವಳಿಯು ಅಂಹಿಸಾತ್ಮಕ ಮಾರ್ಗದಲ್ಲಿರಬೇಕು ಎಂದು ಗಾಂಧೀಜಿಯವರು ಆದೇಶಿಸಿದರು. (ಆರ್.ಆರ್.ದಿವಾಕರ : ಕರನಿರಾಕರಣೆಯ ವೀರಕಥೆ, ಪು.11–12) ಇವರ ಆದೇಶದಂತೆ ಕರ್ನಾಟಕದಲ್ಲಿ ಮೊದಲಿಗೆ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾದಲ್ಲಿ ಎಂ.ಪಿ.ನಾಡಕರ್ಣಿಯವರ ಮುಂದಾಳತ್ವದಲ್ಲಿ 40000 ಸ್ವಯಂ ಸೇವಕರ ಸಹಕಾರದೊಂದಿಗೆ 13ನೇ ಏಪ್ರಿಲ್ 1930 ರಂದು ಪ್ರಾರಂಭವಾಯಿತು. ಇತ್ತ ಬೆಳಗಾವಿ ಭಾಗದಲ್ಲಿ ದೇಶಪಾಂಡೆಯವರು ಸಂಚಾರ ಮಾಡಿ ಉಪ್ಪಿನ ಸತ್ಯಾಗ್ರಹದ ಕುರಿತಾಗಿ ಜಾಗೃತಿ ಮೂಡಿಸಿದರು. ಇವರ ಮುಂದಾಳತ್ವದಲ್ಲಿಯೇ ಬೆಳಗಾವಿಯಲ್ಲಿ 1930ರ ಎಪ್ರಿಲ್ 6 ರಂದು ಸಾರ್ವಜನಿಕ ಸಭೆಯಲ್ಲಿ ಕರಕೊಡದೆ ತಯಾರಿಸಿದ ಉಪ್ಪನ್ನು ಹರಾಜು ಮಾಡಿದ್ದರಿಂದ 7ನೇ ಏಪ್ರಿಲ್ 1930 ರಂದು

ಬಂಧನಕ್ಕೊಳಗಾದರು ಇವರೊಂದಿಗೆ ನಾರಾಯಣರಾವ್ ಜೋಶಿ, ಜೀವನರಾವ್ ಯಾಳಗಿ, ಅನಂತರಾವ್ ದಾಬಡೆಯವರನ್ನು ಬಂಧಿಸಲಾಯತು. (ಅದೇ. ಪು.15) ಉಪ್ಪಿನ ಸತ್ಯಾಗ್ರಹ ಕುರಿತು ಶ್ರೀ.ದಿನಕರ ದೇಸಾಯಿಯವರು ಅಂಕೋಲೆಯ ಉಪ್ಪಿನ ಸತ್ಯಾಗ್ರಹಿಗಳ ಮೇಲೆ ದೇಶಪಾಂಡೆಯವರ ಹೋರಾಟದ ಪ್ರಭಾವ ಹೇಗಿತ್ತು ಎಂಬುದನ್ನು ಒಂದು ಕವನವೊಂದರಲ್ಲಿ ಪರಿಚಯಿಸಿದ್ದಾರೆ.

ಪುಣ್ಯ ಭಾರತವನು ಸುಲಿದು
ಆನರ ಶಕ್ತಿಯನು ಸೆಳೆದು
ಉಪ್ಪಿಗೆ ಕರವ ಹಾಕಿದಂಥ
ವೈರಿಗಳನು ಕಾದು ನಿಂತ
ಅಂಕೋಲೆಯವರು ನಾವು ಪರವು ಧನ್ಯರು ।1।

ಭರತಭೂಮಿ ಚರಣಕೆರಗಿ
ಪ್ರಾಣ ಭೀತಿಯನ್ನು ನೀಗಿ
ಧೈರ್ಯದಿಂದ ಸೆರೆಗೆ ಹೋಗಿ
ರಾಷ್ಟ್ರಧ್ವಜವನ್ನೆತ್ತಿ ಹಿಡಿದ
ಅಂಕೋಲೆಯವರು ನಾವು ಪರವು ಧನ್ಯರು ।2।

ದೇಶಪಾಂಡೆ ಹರ್ಡಿಕರರು
ವೀರಕೌಜಲಗಿಯವರು
ರಂಗನಾಥ ದಿವಾಕರರು
ಹಸ್ತದಿಂದ ಹರಸಿದಂಥ
ಅಂಕೋಲೆಯವರು ನಾವು ಪರವು ಧನ್ಯರು ।3।

ಎಂದು ಅಂಕೋಲಾದವರು ಹಾಡು ಕಟ್ಟಿ ಹಾಡುವುದರ ಮೂಲಕ ಗಂಗಾಧರರಾವ್ ದೇಶಪಾಂಡೆಯವರ ಸ್ವಾತಂತ್ರ್ಯ ಹೋರಾಟದ ಮುಂದಾಳತ್ವ ಮತ್ತು ಅವರ ಭಾಷಣಗಳ ಪ್ರಭಾವ ಎಷ್ಟಿತ್ತೆಂಬುದನ್ನು ಸ್ಪಷ್ಟಪಡಿಸುತ್ತಾರೆ. (ಅದೇ ಪು.23)

ರಾಮದುರ್ಗ ಪ್ರಜಾಸಂಘದ ಸ್ಥಾಪನೆ ಮತ್ತು ಗಂಗಾಧರರಾವ್ ದೇಶಪಾಂಡೆ

ಬೆಳಗಾವಿ ಜಿಲ್ಲೆಯ ತಾಲೂಕಾ ಕೇಂದ್ರವಾದ ರಾಮದುರ್ಗ ಸಂಸ್ಥಾನಕ್ಕೂ ಮತ್ತು ಗಂಗಾಧರರಾವ್ ದೇಶಪಾಂಡೆಯವರಿಗೂ ಅವಿನಾಭಾವ ಸಂಬಂದವುಂಟು ಎಂಬುದಕ್ಕೆ ಹಲವಾರು ಪುರಾವೆಗಳು ಲಭ್ಯವಾಗುತ್ತವೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ರಾಮದುರ್ಗ ತಾಲೂಕಿನ ಜನರ ಹೋರಾಟಕ್ಕೆ ಸಂಘಟನಾತ್ಮಕ ರೂಪ ನೀಡಬೇಕು ಎಂಬ ಜೀವನರಾವ್ ಯಾಳಗಿ ಅವರ ಸಲಹೆ ಮೇರೆಗೆ 'ಪ್ರಜಾಸಂಘ' ಎಂಬ ಹೆಸರಿನ ಸಂಘವೊಂದನ್ನು ಸ್ಥಾಪಿಸಲು ನಿರ್ಧರಿಸಿದರು. (ಡಾ.ಎ.ಬಿ.ವಗ್ಗರ ಮತ್ತು ಎಂ.ಆರ್.ಜರಕುಂಟಿ : ರಾಮದುರ್ಗ ಸಂಸ್ಥಾನದ ವಿಮೋಚನಾ ಹೋರಾಟ, ಪು. 40, ದಾವರ ವರದಿ, ಪು.13) ಈ ಸಂಘದ ಸ್ಥಾಪನೆಗೆ ಮರುಳಾರಾಧ್ಯ ಶಾಸ್ತ್ರೀಗಳು ಬಿ.ಎನ್.ಮುನವಳ್ಳಿ ವಕೀಲರ ಪ್ರಯತ್ನ ಹಾಗೂ ಅಂದಾನೆಪ್ಪ ದೊಡ್ಡಮೇಟಿ ಅವರ ಪ್ರೋತ್ಸಾಹ ಕಾರಣವಾಯಿತು. 13ನೇ ಮೇ 1938 ರಂದು ಸಂಘವು ಅಸ್ಥಿತ್ವಕ್ಕೆ ಬಂದಿತು. (ಡಾ.ಎ.ಬಿ.ವಗ್ಗರ ಮತ್ತು ಎಂ.ಆರ್.ಜರಕುಂಟಿ : ರಾಮದುರ್ಗ ಸಂಸ್ಥಾನದ ವಿಮೋಚನಾ ಹೋರಾಟ, ಪು. 41) ಪ್ರಜಾಸಂಘದವರು ರಾಮದುರ್ಗ ಸಂಸ್ಥಾನಿಕರು ಹೇರಿದ ಹಪ್ತೆ ಮತ್ತು ತೆರಿಗೆಗಳ ವಿಷಯವಾಗಿ ಸಂಸ್ಥಾನಿಕರ ವಿರುದ್ಧ ಹೋರಾಟಕ್ಕಿಳಿದರು. ಮತ್ತು ಹಪ್ತೆ ವಸೂಲಿಗಾಗಿ ಕಂದಾಯಾಧಿಕಾರಿಗಳು ಬರದಂತೆ ಪ್ರತಿಬಂಧಕಗಳನ್ನು ಹೇರತೊಡಗಿದರು ಇದರಿಂದ ಕೋಪೋದ್ರಿಕ್ತನಾದ ಸಂಸ್ಥಾನಿಕ 09.05.1938 ರಂದು ರಾಜದ್ರೋಹಾತ್ಮಕ ಸಭೆಗಳ ಪ್ರತಿಬಂಧಕ ಕಾಯ್ದೆ, ಬಾಮಬೆ ರೆಗ್ಯೂಲೇಶನ್ 25 (1827) ಹಾಗೂ ಸಂಸ್ಥಾನದ ನೊಂದಣಿ ಕಾಯ್ದೆಗಳನ್ನು ಜಾರಿಗೊಳಿಸಿದನು. (ಡಾ.ಎ.ಬಿ.ವಗ್ಗರ ಮತ್ತು ಎಂ.ಆರ್.ಜರಕುಂಟಿ : ರಾಮದುರ್ಗ ಸಂಸ್ಥಾನದ ವಿಮೋಚನಾ ಹೋರಾಟ, ಪು. 45, ದಾವರ ವರದಿ. ಪು.18) ಇದರಿಂದ ರೊಚ್ಚಿಗೆದ್ದ ಪ್ರಜಾಸಂಘದ ಹೋರಾಟಗಾರರು ಸುರೇಬಾನದ ಜಕಾತಿ ಕಟ್ಟೆ ಸುಟ್ಟರು. ಸಂಘದ ನಾಯಕರಾದ ಮುನವಳ್ಳಿ ವಕೀಲರು ಮತ್ತು ಮರುಳಾಧ್ಯ ಶಾಸ್ತ್ರೀಗಳು ಈ ಕುರಿತು ಸಲಹೆ ಕೇಳಲು ಸಾಂಗ್ಲಿಯಲ್ಲಿರುವ ಸರ್ದಾರ್ ವಲ್ಲಭಭಾಯಿ ಪಟೇಲರ ಬಳಿ ಹೋದರು. ಆಗ ಪಟೇಲರು ಹಪ್ತೆ ವಸೂಲಿಯ ವಿಷಯ ಕುರಿತು ಚರ್ಚಿಸುವ ಜವಾಬ್ದಾರಿಯನ್ನು ಗಂಗಾಧರರಾವ್ ದೇಶಪಾಂಡೆ ಮತ್ತು ಶಂಕರರಾವ್‌ದೇವ

ಅವರನ್ನೊಳಗೊಂಡ ಸಮಿತಿಯನ್ನು ರಚಿಸಿ ಕಳುಹಿಸಿದರು. (ಡಾ.ಎ.ಬಿ.ವಗ್ಗರ ಮತ್ತು ಎಂ.ಆರ್.ಜರಕುಂಟಿ : ರಾಮದುರ್ಗ ಸಂಸ್ಥಾನದ ವಿಮೋಚನಾ ಹೋರಾಟ, ಪು. 45, ದಾವರ ವರದಿ. ಪು.24)

5ನೇ ಜೂನ್ 1938 ರಂದು ಸಾಂಗಲಿ ಪರಿಷತ್ತಿನಲ್ಲಿ ನೇಮಕಗೊಂಡ ಗಂಗಾಧರರಾವ್ ದೇಶಪಾಂಡೆ, ಶಂಕರರಾವ್ದೇವ ಕೆ.ಎಸ್.ಪಾಟೀಲ, ಎಸ್.ಎನ್.ಆರಿ, ಗೋವಿಂದರಾವ್ ಕಣಬೂರ, ಅಂದಾನೆಪ್ಪ ದೊಡ್ಡಮೇಟಿ ಅವರನ್ನೊಳಗೊಂಡ ಸಮಿತಿ ರಾಮದುರ್ಗಕ್ಕೆ ಬಂದು ಸಾರ್ವಜನಿಕ ಸಭೆ ನಡೆಸಿದರು. ಸಂಸ್ಥಾನಿಕ ರಾಜಾಸಾಹೇಬನು ತಮ್ಮ ಬೇಡಿಕೆಗಳನ್ನು ಮನ್ನಿಸದಿದ್ದರೆ ತಮ್ಮ ಚಳುವಳಿ ಮುಂದುವರೆಯುವುದು ಎಂದು ಪ್ರಜಾಸಂಘದವರು ಸಮಿತಿಯ ಮುಂದೆ ಎಚ್ಚರಿಕೆ ನೀಡಿದರು. (ಹಾಲಪ್ಪ ಜೆ.ಎಸ್. : ಹಿಸ್ಟರಿ ಆಫ್ ಫ್ರೀಡಮ್ ಮೂವಮೆಂಟ್ ಇನ್ ಕರ್ನಾಟಕ, ಸಂ.2, ಬೆಂಗಳೂರು, 1964, ಪು.472) ಸಮಿತಿಯು ಪ್ರಜಾಸಂಘ ಮತ್ತು ಸಂಸ್ಥಾನಿಕರ ನಡುವೆ ಒಪ್ಪಂದ ಮಾಡಿಸುವುದರ ಮೂಲಕ ಸಂಸ್ಥಾನಿಕನು ಕೆಲವು ಬೇಡಿಕೆಗಳನ್ನು ಮನ್ನಿಸಲು ಒಪ್ಪಿಕೊಂಡನು. ಸಂಸ್ಥಾನಿಕರು ಹೊರಡಿಸಿದ ಜಾಹಿರುನಾಮೆಗೆ ಮುನವಳ್ಳಿ ವಕೀಲರು ಸಹಿ ಹಾಕಿದರು. ಇದರಿಂದ ದೇಶಪಾಂಡೆ ಮುಂದಾಳತ್ವದ ಸಮಿತಿಯು 1.9.1938 ರಂದು ಕಂದಾಯ ಪರಿಶೀಲನಾ ಸಮಿತಿಯನ್ನು ರಚಿಸಿತು. ಅದರಲ್ಲಿ ಸಂಸ್ಥಾನದ ಪರವಾಗಿ ಎಚ್.ಎಸ್.ಕೌಜಲಗಿ, ಅಪ್ಪಾಸಾಹೇಬ ಪಟವರ್ಧನ ಮತ್ತು ಎಸ್.ಕೆ.ಜೋಶಿಯವರನ್ನು ಪ್ರಜಾಸಂಘದ ಪರವಾಗಿ ಬಿ.ಎನ್.ಮುನವಳ್ಳಿ ವಕೀಲರು ಹಾಗೂ ಸಂಗನಗೌಡ ಪಾಟೀಲ (ಕಲ್ಲಾಪುರ) ಇವರನ್ನು ನೇಮಿಸಿತು (ಡಾ.ಎ.ಬಿ.ವಗ್ಗರ ಮತ್ತು ಎಂ.ಆರ್.ಜರಕುಂಟಿ : ರಾಮದುರ್ಗ ಸಂಸ್ಥಾನದ ವಿಮೋಚನಾ ಹೋರಾಟ, ಪು. 48, ದಾವರ ವರದಿ. ಪು.29) ಆದರೆ ಈ ಒಪ್ಪಂದವನ್ನು ಒಪ್ಪದ ಮರುಳರಾಧ್ಯ ಶಾಸ್ತ್ರಿಗಳು ಗಂಗಾಧರರಾವ್ ದೇಶಪಾಂಡೆ ಮತ್ತು ಮುನವಳ್ಳಿ ವಕೀಲರು ಭ್ರಷ್ಟಾಚಾರಿಗಳು ಎಂದು ಆಪಾದನೆ ಮಾಡಿದರು. ಅಲ್ಲದೆ ಅವರು ಸುರೇಬಾನದ ಶ್ರೀ ಶಿವಾನಂದ ಭವನದಲ್ಲಿ ಏಳು ದಿನ ಉಪವಾಸ ಸತ್ಯಾಗ್ರಹ ಕೈಗೊಂಡರು. (ಡಾ.ಎ.ಬಿ.ವಗ್ಗರ ಮತ್ತು ಎಂ.ಆರ್.ಜರಕುಂಟಿ : ರಾಮದುರ್ಗ ಸಂಸ್ಥಾನದ ವಿಮೋಚನಾ ಹೋರಾಟ, ಪು. 45) ಕೊನೆಗೆ ಪ್ರಜಾಸಂಘದ ಭಿನ್ನಾಭಿಪ್ರಾಯಗಳನ್ನು ದೊಡ್ಡಮೇಟಿ ಅಂದಾನಪ್ಪನವರು ಬಗೆಹರಿಸಿದರು. ನೊಂದ ಮರುಳರಾಧ್ಯಶಾಸ್ತ್ರಿಗಳು ರಾಮದುರ್ಗವನ್ನೇ ಬಿಟ್ಟು ಹೋದರು.

ಒಪ್ಪಂದದ ಪ್ರಕಾರ ಕಂದಾಯ ವಿಚಾರಣಾ ಸಮಿತಿಯನ್ನು 1.9.1938 ರಂದು ರಚಿತವಾಯಿತು. ಅದರಲ್ಲಿ ಸಾಂಗ್ಲಿ ಜಮಖಂಡಿ ಮತ್ತು ರಾಮದುರ್ಗ ಸಂಸ್ಥಾನದ ಮೂವರು ದಿವಾನರು ಪ್ರಜಾಸಂಘದ ಪರವಾಗಿ ವೀರಗೌಡ ಪಾಟೀಲ, ಎನ್.ಎಸ್.ಹರ್ಡಿಕರ ಮತ್ತು ಬಿ.ಎನ್.ಮುನವಳ್ಳಿ ವಕೀಲರಿದ್ದರು. ಸಪ್ಟೆಂಬರ್ 29, 30 ರಂದು ಸಮಿತಿಯು ಸಭೆ ನಡೆಸಿತು. ವೀರನಗೌಡ ಪಾಟೀಲ ಮತ್ತು ಅಂದಾನೆಪ್ಪ ದೊಡ್ಡಮೇಟಿ 33% ರಷ್ಟು ಎಂದರೆ ಮುನವಳ್ಳಿ ವಕೀಲರು ಶೇ.40% ರಷ್ಟು, ಗಂಗಾಧರರಾವ್ ದೇಶಪಾಂಡೆ ಮತ್ತು ದಿವಾಕರ ಅವರು ಮೊದಲಿನ ಒಪ್ಪಂದದ ಪ್ರಕಾರ ಶೇ.26% ರಷ್ಟು ಹಪ್ತೆ ಕಡಿತವಾಗಬೇಕು ಎಂದು ಹೇಳಿದರು. ಅಲ್ಲದೆ 10000/– ರೂಗಳ ಗ್ರಾಮಾಭಿವೃದ್ಧಿ ನಿಧಿಯನ್ನು ಪ್ರಜಾಸಂಘಕ್ಕೆ ನೀಡಬೇಕೆಂದು ತೀರ್ಮಾನಿಸಿದರು. ಭೂ ಕಂದಾಯದ ಪರಿಶೀಲನಾ ಸಲಹೆಗಾರನಾಗಿದ್ದ ಡೇ ಬ್ರಿಟಿಷ್ ಭಾರತದಲ್ಲಿನ 'ಭಾರತೀಯ ನಾಗರಿಕ ಸೇವೆ'ಯಲ್ಲಿ ಮತ್ತು ಸಾಂಗ್ಲಿ ಸಂಸ್ಥಾನದ ದಿವಾನನಾಗಿ ಕಾರ್ಯನಿರ್ವಹಿಸುತ್ತಿದ್ದರು. ಇವರು 9.11.1938 ರಂದು ಗಂಗಾಧರರಾವ್ ದೇಶಪಾಂಡೆಯವರಿಗೆ ಪತ್ರ ಪಬರೆದು "ಕಂದಾಯದಲ್ಲಿ 100 ಕ್ಕೆ 33 ರಷ್ಟು ಕಡಿತಗೊಳಿಸಿದರೆ ತತ್ಸಸಮವಾಗಲಾರದು, ಇದರಿಂದ ಸಣ್ಣ ರೈತರಿಗಿಂತ ದೊಡ್ಡ ಜಮೀನ್ದಾರರಿಗೆ ಹೆಚ್ಚು ಲಾಭವಾಗುವುದು" ಎಂದು ತಿಳಿಸಿದರು. ಕೊನೆಯಲ್ಲಿ ಗಂಗಾಧರರಾವ್ ದೇಶಪಾಂಡೆ ಮತ್ತು ದಿವಾಕರ ಅವರ ಸಲಹೆಯನ್ನು ಒಪ್ಪಿ ಶೇ.26ರಷ್ಟು ಹಪ್ತೆ ಕಡಿತಮಾಡಲು ಸಂಸ್ಥಾನಿಕರು ಒಪ್ಪಿಕೊಂಡರು. (ಹಾಲಪ್ಪ ಜೆ.ಎಸ್. : ಹಿಸ್ಟರಿ ಆಫ್ ಫ್ರೀಡಮ್ ಮೂವಮೆಂಟ್ ಇನ್ ಕರ್ನಾಟಕ, ಸಂ.2, ಬೆಂಗಳೂರು, 1964, ಪು.474) ಸಂಸ್ಥಾನಿಕರ ಈ ನಿರ್ಧಾರವನ್ನು ಪ್ರಜಾಸಂಘವು ವಿರೋಧಿಸಿತು.

ಹನಮಂತರಾವ್ ಕೌಜಲಗಿಯವರ ಅಧ್ಯಕ್ಷತೆಯಲ್ಲಿ ಸಲಹಾ ಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿಯ ಅಧ್ಯಯನಕ್ಕಾಗಿ ಸಂಸ್ಥಾನದ ಎಲ್ಲಾ ಆಯವ್ಯಯಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಪರಿಶೀಲನೆಗಾಗಿ ತೋರಿಸಬೇಕೆಂದು ಪ್ರಜಾಸಂಘವು ಕೇಳಿತು ಮತ್ತು ಈ ಆಯವ್ಯಯ ಪರಿಶೀಲನೆಗೆ ಐದು ಜನರನ್ನೊಳಗೊಂಡ ತಪಾಸಣಾ ಸಮಿತಿಯನ್ನು ರಚಿಸಲಾಯಿತು. ಆದರೂ ಪ್ರಜಾಸಂಘದ ಬೇಡಿಕೆ ಇಡೇರದೇ ಹೋದಾಗ ಹೋರಾಟ ಮುಂದುವರೆದವು. ರಾಮದುರ್ಗದ ತೇರಬಜಾರದ ಪ್ರತಿಮಾಸದ ಪೌರ್ಣಿಮೆಯಂದು ನೆರವೇರುತ್ತಿದ್ದ ಧ್ವಜಾರೋಹಣ ಮತ್ತು ಧ್ವಜಸ್ತಂಭವನ್ನು ಸಂಸ್ಥಾನಿಕರ ಪರ ಪೋಲಿಸ್ ಸಿಬ್ಬಂದಿ ಕಿತ್ತುಹಾಕಿದ್ದು ಮತ್ತು ಘಟನೆಯನ್ನು ವಿರೋಧಿಸಿ ನಡೆಸಿದ ಚಳುವಳಿಗಾರರ ಮೇಲೆ ದಾಳಿಮಾಡಿ ಮುನವಳ್ಳಿ ವಕೀಲರನ್ನು ಬಂಧಿಸಿ ಹಿಂಸೆ ಕೊಟ್ಟಿದ್ದನ್ನು ಸಹಿಸದ ಪ್ರಜೆಗಳು ಜೈಲನ್ನೇ ಧ್ವಂಸಗೊಳಿಸಿದ ಘಟನೆಗಳಿಂದ ಬಂಧಿಸಿಲ್ಪಟ್ಟ 28 ಜನ ಕುಟುಂಬದವರಿಗೆ ಜೈಲರ ನೀಡುತ್ತಿದ್ದ ಚಿತ್ರಹಿಂಸೆಯನ್ನು ತಪ್ಪಿಸಬೇಕೆಂದು ವಿನಂತಿಸಿಕೊಳ್ಳಲು

ಪ್ರಜಾಸಂಘದ ಸದಸ್ಯರೊಂದಿಗೆ ಲಿಂಗನಗೌಡ ಪಾಟೀಲರು ಅಂದಾನಪ್ಪ ದೊಡ್ಡಮೇಟಿಯವರ ಬಳಿ ಹೋದಾಗ ಅವರು ಗಂಗಾಧರರಾವ್ ದೇಶಪಾಂಡೆಯವರ ಬಳಿ ಕಳುಹಿಸಿದರು. ದೇಶಪಾಂಡೆಯವರು ಈ ಹಿಂದೆ ನನ್ನ ಮೇಲೆ ಮಾಡಿದ ಆರೋಪಗಳು ಸುಳ್ಳೆಂದು, ಅದರಿಂದ ನಮಗೆ ಪಶ್ಚಾತ್ತಾಪವಾಗಿದೆ ಎಂದು ಪತ್ರಿಕಾ ಪ್ರಕಟನೆ ನೀಡಿದರೆ ಜೈಲಿನಲ್ಲಿರುವವರಿಗೆ ಶಿಕ್ಷೆ ಅಷ್ಟೇ ಅಲ್ಲ, ಗಲ್ಲು ಶಿಕ್ಷೆಯನ್ನು ಕಡಿಮೆ ಮಾಡಿಸಲು ಪ್ರಯತ್ನಿಸುವೆನೆಂದು ಹೇಳಿದರು. ಇವರ ಮಾತಿನಿಂದ ಬೇಸರಗೊಂಡ ದೊಡ್ಡಮೇಟಿಯವರು ವಲ್ಲಭಬಾಯಿ ಪಟೇಲರನ್ನು ಕಾಣುವುದು ಸೂಕ್ತವೆಂದು ಲಿಂಗನಗೌಡರಿಗೆ ಸಲಹೆ ನೀಡಿದರು. (ಡಾ.ಎ.ಬಿ.ವಗ್ಗರ ಮತ್ತು ಎಂ.ಆರ್.ಜರಕುಂಟಿ : ರಾಮದುರ್ಗ ಸಂಸ್ಥಾನದ ವಿಮೋಚನಾ ಹೋರಾಟ, ಪು. 80) ಆ ಪ್ರಕಾರ ಲಿಂಗನಗೌಡರು ಪಟೇಲರನ್ನು ಮುಂಬೈಯಲ್ಲಿ ಭೇಟಿಯಾಗಿ ಚರ್ಚಿಸಿದರು. ಅವರು ಲಠ್ಠೆಯವರೊಂದಿಗೆ ಮಾತನಾಡಿ ನೀವು ರಾಮದುರ್ಗಕ್ಕೆ ಹೋಗಿ ಪ್ರಜಾಸಂಘದವರನ್ನು ಗಲ್ಲುಶಿಕ್ಷೆಯಿಂದ ಉಳಿಸಲು ತಿಳಿಸಿದರು. ಲಠ್ಠೆಯವರು ರಾಮದುರ್ಗಕ್ಕೆ ಬರುವಷ್ಟರಲ್ಲಿಯೇ ಜಾಗತಿಕ ಎರಡನೆ ಮಹಾಯುದ್ಧ ಸಂಭವಿಸಿದ್ದರಿಂದ ಲಠ್ಠೆಯವರ ಸರ್ಕಾರ ಸಾಮೂಹಿಕ ರಾಜಿನಾಮೆ ನೀಡಿದ್ದರಿಂದ ಪ್ರಜಾಸಂಘದವರ ಆಶೆ ನಿರಾಶೆಯಾಯಿತು.

**ಗಂಗಾಧರರಾವ್ ದೇಶಪಾಂಡೆಯವರ ಮುಂದಾಳತ್ವದ ಕುರಿತಾದ ಕೆಲವು ಆಕ್ಷೇಪಣೆಗಳು :**

ರಾಮದುರ್ಗ ಸಂಸ್ಥಾನದ ವಿಮೋಚನಾ ಚಳುವಳಿಯು ಜಾತಿವಾದಿತನದ ರೂಪ ಪಡೆದುಕೊಳ್ಳಲಾರಂಭಿಸಿದ್ದು ಅದಕ್ಕೆ ಕೆಲವು ಪ್ರಾಂತೀಯ ಕಾಂಗ್ರೆಸ್ ನಾಯಕರೇ ಹೊಣೆಗಾರರು ಎಂಬುದನ್ನು ಮನಗಂಡ ಧಾರವಾಡದಲ್ಲಿ 18.05.1939 ರಲ್ಲಿ ಸಭೆ ಸೇರಿದ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮೀಟಿಯು ಕಾರ್ಯಕರ್ತರಲ್ಲಿರುವ ಜಾತಿಭೇದವನ್ನು ತಡೆಯುವಂತೆ ಗಾಂಧೀಜಿಗೆ ತಿಳಿಸಿ ಅವರಿಂದ ಸಲಹೆ ಪಡೆಯಲು ಎಂ.ಪಿ.ಪಾಟೀಲ, ಎನ್.ಎಸ್.ಅಂಗಡಿ, ಬಿ.ಎನ್.ಗುಪ್ತ, ವೀರನಗೌಡ ಪಾಟೀಲ ಮತ್ತು ಮುನವಳ್ಳಿ ವಕೀಲರಿಂದ ಕೂಡಿದ ಸಭೆ ನಡೆದು ಚರ್ಚೆಯಾಯಿತು. ಆಗ ವೀರನಗೌಡ ಪಾಟೀಲರು ಸಂಸ್ಥಾನದಲ್ಲಿ ಶಾಂತಿ ನೆಲೆಗೊಳ್ಳಲು ಗಂಗಾಧರರಾವ್ ದೇಶಪಾಂಡೆ, ಹಳ್ಳಿಕೇರಿ, ಅಂದಾನೆಪ್ಪ ದೊಡ್ಡಮೇಟಿ, ದೇಪೂರ, ದಿವಾಕರ, ವೆಂಕರಡ್ಡಿ ಹೂಲಿ ಅವರಿಂದ ಕೂಡಿದ ಸಮಿತಿಯೊಂದ ರಚಿಸಬೇಕು ಎಂದಾಗ ಕೆಲವು ಕಾರ್ಯಕರ್ತರು ಆಕ್ಷೇಪ ಮಾಡಿದರು. ಈ ಸಮಿತಿಯಲ್ಲಿ ಗಂಗಾಧರರಾವ್ ದೇಶಪಾಂಡೆ ಮತ್ತು ರಂಗರಾವ್ ದಿವಾಕರರಂಥಹ ಎಲ್ಲರಿಂದ ತಿರಸ್ಕೃತರಾದ ಜನರನ್ನು ಸೇರಿಸಬಾರದು, ದೇಶಪಾಂಡೆಯವರು 1938ರಂದು ರಾಮದುರ್ಗ ವಿಷಯಲ್ಲಿ ಹಸ್ತಕ್ಷೇಪ ಮಾಡಿ ಸಂಸ್ಥಾನವನ್ನೇ ಹಾಳು ಮಾಡಿರುತ್ತಾರೆಂದು ಅವರ ಮೇಲೆ ಆರೋಪವಿದೆ. ಇವರು ಸರ್ಕಾರದ ದುಡ್ಡು ತಿಂದು ಪಿತೂರಿ ನಡೆಸಿರುವರೆಂದು ಹಲವರ ಅಂಬೋಣವಾಗಿದೆ. ತರುಣ ಕರ್ನಾಟಕ ಪತ್ರಿಕೆಯಲ್ಲಿ ಇವರ ಮೇಲೆ ಹಲವಾರು ಆರೋಪಗಳು ಪ್ರಕಟವಾಗಿವೆ ಬಾಗಲಕೋಟೆ ಸಭೆಯವರು ತಮ್ಮ ವರದಿಯಲ್ಲಿ ಇವರ ಮೇಲೆ ಕೆಲವೊಂದು ಆರೋಪಗಳನ್ನು ಮಾಡಿದ್ದಾರೆ. ಬೈಲಹೊಂಗಲ ಕಾಂಗ್ರೆಸ್ ಕಮಿಟಿಯವರು ಇವರ ವಿರುದ್ಧ ಅವಿಶ್ವಾಸದ ಗೊತ್ತುವಳಿ ಮಂಡಿಸಿದ್ದಾರೆ. ಇಂತಹ ಅವಿಶ್ವಾಸಿಕ ಜನರನ್ನು ನೇಮಿಸಬಾರದು ಒಂದು ವೇಳೆ ಇಂತಹವರು ಸಮಿತಿಯಲ್ಲಿ ಇದ್ದರೆ ಲಾಭಕ್ಕಿಂತ ಹಾನಿಯೇ ಹೆಚ್ಚು ಎಂದು ಹೇಳಿದರು. (ಡಾ.ಎ.ಬಿ.ವಗ್ಗರ ಮತ್ತು ಎಂ.ಆರ್.ಜರಕುಂಟಿ : ರಾಮದುರ್ಗ ಸಂಸ್ಥಾನದ ವಿಮೋಚನಾ ಹೋರಾಟ, ಪು. 45, ನವಕರ್ನಾಟಕ ಪತ್ರಿಕೆ, 25ನೇ ಮೇ 1939. ಪು.6)

**ಭಾರತ ಬಿಟ್ಟು ತೊಲಗಿ ಚಳುವಳಿ ಮತ್ತು ಗಂಗಾಧರರಾವ್ ದೇಶಪಾಂಡೆ :**

ಭಾರತ ಬಿಟ್ಟು ತೊಲಗಿ ಚಳವಳಿಯ ಸಂದರ್ಭದಲ್ಲಿ 5ನೇ ಅಗಸ್ಟ್ 1942 ರಂದು ಬೆಳಗಾವಿ ಜಿಲ್ಲೆಯ ಕಾಂಗ್ರೆಸ್ ಸಮಿತಿ ಹಾಗೂ ಕಾರ್ಯಕರ್ತರ ಒಂದು ರಹಸ್ಯ ಸಭೆ ಜರುಗಿದಾಗ ದೇಶಪಾಂಡೆಯವರು ಹೋರಾಟದ ರೂಪರೇಷೆಗಳನ್ನು ಕುರಿತು ಭಾಷಣ ಮಾಡಿದರು. ಈ ಚಳುವಳಿ ಆರಂಭವಾಗುವ ಮೊದಲು ಇದು ಸತ್ಯಾಗ್ರಹವಲ್ಲ ಜೈಲು ತುಂಬುವುದು ಇದರ ಉದ್ದೇಶವಲ್ಲ. ಇದು ಬ್ರಿಟಿಷ ಸರ್ಕಾರದ ವಿರುದ್ದ ಹೂಡಿದ ಬಂಡು ಎಂಬುದನ್ನು ತಿಳಿದ ಪ್ರತಿಯೊಬ್ಬರೂ ತಾವಾಗಿಯೇ ಮುಖಂಡರಾಗಿ ಈ ಕೊನೆಯ ಹೋರಾಟ ನಡೆಸಬೇಕು" ಎಂದು ಕರೆಕೊಟ್ಟರು. 8ನೇ ಅಗಷ್ಟ 1942 ರಂದು ಮುಂಬೈಯಲ್ಲಿ ಆಯೋಜನೆಗೊಂಡ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಮಿತಿಯ ಅಧಿವೇಶನಕ್ಕೆ ಹೋದಾಗ ಅಲ್ಲಿ ಬಂಧನಕ್ಕೊಳಪಟ್ಟು 5 ಬಾರಿ ಜೈಲು ಸೇರಿದರು. ಆದರೂ ಧೈರ್ಯಗುಂದದೆ ಬಿಡುಗಡೆಗೊಂಡು ಬಂದ ತಕ್ಷನವೇ ಮತ್ತೆ ಹೋರಾಟದ ಮಾರ್ಗವನ್ನೇ ಅನುಸರಿಸುತ್ತಿದ್ದರು.

**ಕರ್ನಾಟಕದ ಏಕೀಕರಣ ಹೋರಾಟ ಮತ್ತು ಗಂಗಾಧರರಾವ್ ದೇಶಪಾಂಡೆ**

ಭಾರತ ಸ್ವತಂತ್ರ್ಯಗೊಂಡಾಗ ಕನ್ನಡಿಗರ ಕನಸು ನನಸಾಯಿತೆಂದು ನಿಟ್ಟುಸಿರು ಬಿಟ್ಟರೂ ಇನ್ನೂ ಆಶೆ ಪೂರ್ಣವಾಗಿರಲಿಲ್ಲ. ಕನ್ನಡ ಮಾತನಾಡುವ ಪ್ರಾಂತ್ಯಗಳೆಲ್ಲಾ ಒಂದಾಗಿ ಏಕೀಕೃತ ಕರ್ನಾಟಕ ನಿರ್ಮಾಣವಾಗಬೇಕೆಂದು ಅದಕ್ಕಾಗಿ ಹಗಲಿರುಳು ಶ್ರಮಿಸತೊಡಗಿದರು. ಫಜಲ್ ಅಲಿ ಆಯೋಗವು ಬೆಳಗಾವಿಗೆ ಬಂದಾಗ ಆಯೋಗವು ಗಂಗಾಧರರಾವರನ್ನು ಅವರ ಮನೆಯಲ್ಲಿಯೇ ಕಂಡು ಅವರ ಅಭಿಪ್ರಾಯ ಪಡೆದರು. ಆಗ ದೇಶಪಾಂಡೆಯವರು ಬೆಳಗಾವಿಯಲ್ಲಿ ಮರಾಠಿ ಭಾಷೆಯನ್ನಾಡುವ ಜನರು ಸಾಕಷ್ಟು ಇದ್ದರೂ ಬೆಳಗಾವಿ ಎಂದೆಂದಿಗೂ ಕರ್ನಾಟಕದ ಅವಿಭಾಜ್ಯ ಅಂಗವೆಂದು ಹೇಳಿದರು. ಹೀಗೆ ಭಾರತಾಂಬೆಯನ್ನು ಆಂಗ್ಲರ ಕಪಿಮುಷ್ಠಿಯಿಂದ ಬಿಡುಗಡೆಗೊಳಿಸಲು ಶ್ರಮಿಸಿದ ಶ್ರಮ 1947 ರ ಅಗಷ್ಟ 15 ರಂದು ಸಾರ್ಥಕವಾಯಿತೆಂದು ಭಾವಿಸಿದರು. ಇಂತಹ ಜನಾನುರಾಗಿ ನಾಯಕ 30ನೇ ಜುಲೈ 1960 ರಂದು ಬೆಳಗಾವಿಯ ತಮ್ಮ ನಿವಾಸದಲ್ಲಿಯೇ ಅಸ್ತಂಗತರಾದರು. ಅಂದಿನ ಭಾರತದ ರಾಷ್ಟ್ರಪತಿಗಳಾಗಿದ್ದ ಡಾ.ಬಾಬುರಾಜೇಂದ್ರ ಪ್ರಸಾದ, ಬಿ.ಡಿ.ಜತ್ತಿ. ಬಿ.ಎನ್.ದಾತಾರ ಮುಂತಾದ ರಾಷ್ಟ್ರನಾಯಕರು ಸೇವಾದಳದ ನಾಯಕರಾಗಿದ್ದ ಎನ್.ಎಸ್.ಹರ್ಡಿಕರರು ದೇಶಪಾಂಡೆಯವರ ದೇಶಸೇವೆಯನ್ನು ಅವರ ಸೇವೆ, ಸಂಘಟನಾ ಶೈಲಿಯನ್ನು ಪ್ರಶಂಸಿಸಿ ಗಂಗಾಧರರಾವ್ ದೇಶಪಾಂಡೆ ಅವರಿಗೆ 'ಕರ್ನಾಟಕದ ಸಿಂಹ" ಎಂದು ಹೆಸರಿಸಿ ಅವರ ದೇಶಪ್ರೇಮವನ್ನು ಸ್ಮರಿಸಿದ ಸಂದರ್ಭ ಎಂದಿಗೂ ಮರೆಯಲಾಗದು.

ಆಧಾರ ಗ್ರಂಥಗಳು :


1. ಕಾಮತ ಸೂರ್ಯನಾಥ (ಸಂ) : ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಗೀತಾ ಬುಕ್ ಹೌಸ್ ನ್ಯೂ ಸ್ಟಾಚ್ಯು ಸರ್ಕಲ್, ಮೈಸೂರು, 1974
2. ದಾಬಡೆ ನರಸಿಂಹ : ಸ್ವಾತಂತ್ರ್ಯ ಸಂಗ್ರಾಮದ ನೋವು ನಲಿವುಗಳು : ಸರ್ವೋದಯ ಶಿಕ್ಷಣ ಟ್ರಸ್ಟ, ಧಾರವಾಡ. 1996
3. ಜೋಶಿ ಕೃ. ಪ : ಭಾರತ ಸ್ವಾತಂತ್ರ್ಯ ಸಂಗ್ರಾಮ ದರ್ಶನ, ಅರ್ಥವಿಕಾಶ ಕನ್ನಡ ವಾರಪತ್ರಿಕೆ ವಿಠೋಬಗಲ್ಲಿ ಹುಬ್ಬಳ್ಳಿ, 1998
4. ಶರ್ಮ ತಿರುಮಲ ತಾತಾಚಾರ್ಯ: ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ, ಮೈಸೂರು ಸಂಸ್ಥಾನದ ಸರಕಾರ. ಬೆಂಗಳೂರು, 1956
5. ವಿ.ಎಸ್.ನಾರಾಯಣರಾವ್ : ಸ್ವಾತಂತ್ರ್ಯ ಸಂಗ್ರಾಮದಲ್ಲಿ ಶ್ರೀಸಾಮಾನ್ಯ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು. 1978
6. ಶಾಸ್ತ್ರಿ ಎಲ್. ಎಸ್ : ಸ್ವಾತಂತ್ರ್ಯ ಸಂಗ್ರಾಮ (ರಾಷ್ಟ್ರ, ರಾಜ್ಯ ಹಾಗೂ ಬೆಳಗಾವಿ ಜಿಲ್ಲೆಯಲ್ಲಿ), ಬೆಳಗಾವಿ ಜಿಲ್ಲಾ ಸ್ವಾತಂತ್ರ್ಯ ಯೋಧರ ಶೈಕ್ಷಣಿಕ ಸಂಘ ನಿ, ಬೆಳಗಾವಿ 2006
7. ವಗ್ಗರ ಎ.ಬಿ ಮತ್ತು ಜರಕುಂಟಿ ಎಂ.ಆರ್ : ರಾಮದುರ್ಗ ವಿಮೋಚನಾ ಹೋರಾಟ. ಉಡಯಿ ಪ್ರಕಾಶನ, ಗದಗ. 2012